148

43.

<u>ಕರ್ನಾಟಕ ಸರ್ಕಾರ</u>

ಸಂಖ್ಯೆ: ಆರ್‌ಡಿ 57 ಎಲ್‌ಜಿಪಿ 98(ಪಿ)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 30-10-2000.

## ಸುತ್ತೋಲೆ

ವಿಷಯ: ಸರ್ಕಾರಿ ಜಮೀನುಗಳನ್ನು ಅನಧಿಕೃತ
ಕಟ್ಟಡಗಳ ನಿರ್ಮಾಣಗಳನ್ನು ಸಕ್ರಮೀಕರಿ-
ಸುವ ಬಗ್ಗೆ.

---

ರಾಜ್ಯದಲ್ಲಿ ಸರ್ಕಾರಿ ಜಮೀನುಗಳನ್ನು ಅನಧಿಕೃತವಾಗಿ ವಸತಿ ಉದ್ದೇಶಕ್ಕಾಗಿ ನಿರ್ಮಿಸಿರುವ ಕಟ್ಟಡಗಳನ್ನು ಸಕ್ರಮೀಕರಿಸಲು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ಕ್ಕೆ ತಿದ್ದುಪಡಿ ತಂದು ಹೊಸ ಕಲಂ 94-ಸಿ ಅನ್ನು ಸೇರಿಸಲಾಗಿದೆ. ಇದನ್ನು 1-1-2000ದಿನಾಂಕದಿಂದ ಜಾರಿಗೆ ತರಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ನಿಯಮಾವಳಿಗಳನ್ನು '' <u>ಕರ್ನಾಟಕ ಸ್ವಾಧೀನದಲ್ಲಿರುವ ಭೂಮಿಯಲ್ಲಿ ವಾಸದ ನಿರ್ಮಾಣಕ್ಕೆ ಸಂಬಂಧಿಸಿದ ಭೂ ಮಂಜೂರಾತಿ ನಿಯಮಗಳು 1999</u>'' ನಿಯಮಗಳ ಅಂತಿಮ ಅಧಿಸೂಚನೆಯನ್ನು 25-3-2000ದಿನಾಂಕದಂದು ಹೊರಡಿಸಿ ಕರ್ನಾಟಕ ರಾಜ್ಯಪತ್ರದ 25-3-2000 ದಿನಾಂಕದ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

ಈ ನಿಯಮಗಳನ್ನು ಜಾರಿಗೊಳಿಸುವ ಕುರಿತಂತೆ ಕೆಲವು ಜಿಲ್ಲೆಯ ಜಿಲ್ಲಾಧಿಕಾರಿಗಳು, ಕೆಲವೊಂದು ಅಂಶಗಳ ಬಗ್ಗೆ ಸರ್ಕಾರದ ಸ್ಪಷ್ಟೀಕರಣ ಕೋರಿರುತ್ತಾರೆ. ಸ್ಪಷ್ಟೀಕರಣವನ್ನು ಕೆಳಕಂಡಂತೆ ನೀಡಲಾಗಿದೆ.

1) ಸಾರ್ವಜನಿಕ ಉದ್ದೇಶಕ್ಕಾಗಿ ಕಾದಿರಿಸಲಾದ ಗುಂಡುತೋಪು, ಗ್ರಾಮಠಾಣ, ಸರ್ಕಾರಿ ಬಂಡಿ, ಸಾಲಾ ಖರಾಬು, ರಸ್ತೆ, ಕೆರೆಯಂಗಳ, ತೋಪು, ದಾರಿ ಮುಂತಾದವುಗಳು ಇರುವ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿರುವ ನಿರ್ಮಾಣಗಳನ್ನು ಸಕ್ರಮೀಕರಣಗೊಳಿಸಲು ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಪ್ರದೇಶಗಳ ಜಮೀನುಗಳನ್ನು ಸಂಬಂಧಿಸಿದ ಸರ್ಕಾರದ ಆಡಳಿತ ಇಲಾಖೆಯ ಅಧಿಕಾರಿಗಳೊಡನೆ ಸ್ಥಳ ಪರಿಶೀಲನೆ ಮಾಡಿ ನಿರ್ದಿಷ್ಟ ಉದ್ದೇಶಗಳಿಗಾಗಿ ಕಾಯ್ದಿರಿಸಿದ ಮೇಲಿನ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕೆ ಅವಶ್ಯಕತೆ ಇದೆಯೇ? ಅಥವಾ ಇಲ್ಲವೇ ಹಾಗೂ ನಿರ್ದಿಷ್ಟ ಉದ್ದೇಶಗಳ ಜಮೀನಿನ ಲಕ್ಷಣಗಳನ್ನು ಕಳೆದುಕೊಂಡಿದೆಯೇ? ಅಥವಾ ಇಲ್ಲವೇ? ಎಂಬ ಬಗ್ಗೆ ದೃಢಪಡಿಸಿಕೊಂಡು, ನಂತರ ಆ ಬಗ್ಗೆ ಪರಿಶೀಲಿಸಿ ಜಾರಿಯಲ್ಲಿರುವ ನಿಯಮಗಳನುಸಾರ ಆ ಪ್ರದೇಶಗಳನ್ನು ಕಾಯ್ದಿರಿಸಿದ ಉದ್ದೇಶಗಳಿಂದ ವಿಮುಕ್ತಗೊಳಿಸಿ ಸಕ್ರಮೀಕರಣಗೊಳಿಸಲು ಸರ್ಕಾರದ ಪೂರ್ವಾನುಮತಿ ಪಡೆಯುವುದು;

2) ಅರಣ್ಯ ಸಂರಕ್ಷಣೆ ಕಾಯ್ದೆಯಡಿ ಅರಣ್ಯ ಎಂದು ಘೋಷಿಸಲಾಗಿರುವ ಅರಣ್ಯ ಪ್ರದೇಶದಲ್ಲಿ ಮತ್ತು ಸ್ಮಶಾನಕ್ಕಾಗಿ ಕಾಯ್ದಿರಿಸಿದಂತಹ ಸ್ಮಶಾನ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ನಿರ್ಮಾಣಗಳನ್ನು ಯಾವುದೇ ಕಾರಣಕ್ಕೆ ಸಕ್ರಮೀಕರಣಗೊಳಿಸಬಾರದೆಂದು ಸೂಚಿಸಲಾಗಿದೆ;

—2—

3) ಈ ನಿಯಮಾವಳಿಗಳ ನಿಯಮ 7ರಲ್ಲಿ ಸಕ್ಷಮ ಪ್ರಾಧಿಕಾರಗಳನ್ನು ಸಂಬಂಧಿಸಿದ ಮಹಾನಗರಪಾಲಿಕೆಗಳ ವ್ಯಾಪ್ತಿ, ನಗರ ಸಭೆಗಳ ವ್ಯಾಪ್ತಿ ಹಾಗೂ ಪುರಸಭೆಗಳ ವ್ಯಾಪ್ತಿ ಹಾಗೂ ಇತರೆ ಪ್ರದೇಶಗಳ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸಲು ಅಧಿಕಾರ ನೀಡಲಾಗಿದೆ. ಪಟ್ಟಣ ಪಂಚಾಯಿತಿ ವ್ಯಾಪ್ತಿಗಳಲ್ಲಿನ ಮನೆಗಳ ಕುರಿತಂತೆ ಸಕ್ರಮೀಕರಣಗೊಳಿಸುವ ಅಧಿಕಾರಿಗಳು ಯಾರೆಂಬ ಬಗ್ಗೆ ಸ್ಪಷ್ಟೀಕರಣ ಕೋರಿರುವುದು, ಪಟ್ಟಣ ಪಂಚಾಯಿತಿ ಎಂಬ ಬಗ್ಗೆ ವಿವರಣೆಗಳು "ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರಡಿಯಲ್ಲಿ" "ಪಟ್ಟಣ ಪಂಚಾಯಿತಿ" ಬಗ್ಗೆ ವ್ಯಾಖ್ಯಾನಿಸಿರುವುದಿಲ್ಲ. ಆದಕಾರಣ ಅಂತಹ ಪ್ರದೇಶಗಳಲ್ಲಿ ನಿಯಮ 7ರ ಕೋಷ್ಟಕದ ಕ್ರಮ ಸಂಖ್ಯೆ:5ರಲ್ಲಿ ಉಲ್ಲೇಖಿಸಿರುವ ಸಕ್ಷಮ ಪ್ರಾಧಿಕಾರಗಳಾದ ಸಂಬಂಧಿಸಿದ ತಾಲ್ಲೂಕಿನ ತಹಸೀಲ್ದಾರರುಗಳೇ ಅನಧಿಕೃತ ಕಟ್ಟಡಗಳನ್ನು ಸಕ್ರಮೀಕರಿಸಲು ಅಧಿಕಾರ ಹೊಂದಿದವರಾಗಿರುತ್ತಾರೆ.

4) ಅನಧಿಕೃತ ನಿರ್ಮಾಣ ಮತ್ತು ಅದಕ್ಕೆ ಹೊಂದಿಕೊಂಡಂತೆ ಬೇರೆ: ಕಾಂಪೌಂಡ್ ನಿರ್ಮಿಸಿ ಸ್ವತ: ವಾಸ ಮಾಡಿಕೊಂಡಿರುವ ಒಟ್ಟು ಪ್ರದೇಶವು 50 80 ಅಡಿಗಳ ವಿಸ್ತೀರ್ಣಕ್ಕೆ ಒಳಪಟ್ಟಂತೆ ಮಾತ್ರ ಸಕ್ರಮೀಕರಣಗೊಳಿಸಬಹುದು. ಈ ವಿಸ್ತೀರ್ಣವನ್ನು ಮೀರಿದ ಪ್ರದೇಶಗಳು ಹಾಗೂ ವಸತಿಯೇತರ ಉದ್ದೇಶಕ್ಕಾಗಿ ಬಳಕೆ ಮಾಡಿಕೊಂಡಿದ್ದಲ್ಲಿ ಸಕ್ರಮೀಕರಣಗೊಳಿಸಬಾರದೆಂದು ಸೂಚಿಸಲಾಗಿದೆ.

5) ಈ ಕಾಯಿದೆ ಹಾಗೂ ನಿಯಮಗಳು ಜಾರಿಗೆ ಬರುವ ಮುನ್ನ ಅನಧಿಕೃತ ಕಟ್ಟಡಗಳನ್ನು ಹೊಡೆದು ಹಾಕುವಂತೆ ಆದೇಶವಾಗಿದ್ದು ಅಂತಹ ಕಟ್ಟಡಗಳಲ್ಲಿ ವಾಸಕ್ಕಾಗಿ ಉಪಯೋಗಿಸಿಕೊಂಡು ಹಾಲಿ ವಾಸ ಮಾಡುತ್ತಿದ್ದಲ್ಲಿ ಅರ್ಜಿದಾರರು ಸದರಿ ಕಾಯಿದೆಯಡಿ ಸಕ್ರಮೀಕರಣಕ್ಕಾಗಿ ಅರ್ಜಿ ಸಲ್ಲಿಸಿ ಮಂಜೂರಾತಿ ಕೋರಿದ್ದಲ್ಲಿ ಅಂತಹ ನಿರ್ಮಾಣಗಳನ್ನೂ ಸಹ ಸಕ್ರಮೀಕರಣಗೊಳಿಸಬಹುದಾಗಿದೆ.

6) ಅನಧಿಕೃತ ನಿರ್ಮಾಣಗಳಲ್ಲಿ ಸ್ವತ: ಅರ್ಜಿದಾರರು ವಾಸವಾಗಿದ್ದಲ್ಲಿ ಮಾತ್ರ ಸಕ್ರಮೀಕರಿಸಿ ಮಂಜೂರು ಮಾಡಬಹುದು.

7) ಈ ಕಾಯಿದೆ ಅಡಿಯಲ್ಲಿ ಅನಧಿಕೃತ ನಿರ್ಮಾಣ ಅಂದರೆ ವಾಸಕ್ಕಾಗಿ ಉಪಯೋಗಿಸಲ್ಪಡುತ್ತಿರುವ ಪಕ್ಕಾ ಕಟ್ಟಡ, ಅರೆ ಕಾಯಂ ಕಟ್ಟಡ, ಕಚ್ಚಾ ಮನೆ ಅಥವಾ ಗುಡಿಸಲು ಇವುಗಳಲ್ಲಿ ಹಾಲಿ ವಾಸಿಸುತ್ತಿದ್ದಲ್ಲಿ ಮಾತ್ರ ಸಕ್ರಮೀಕರಣಕ್ಕೆ ಪರಿಗಣಿಸುವುದು.

ಪರಿಗಣಿಸುವುದು.

8) ಇಂತಹ ಕಟ್ಟಡಗಳಲ್ಲಿ ವಾಸಿಸುತ್ತಿರುವವರು ಈಗಾಗಲೆ ಸಕ್ರಮೀಕರಣಕ್ಕಾಗಿ ''ಕರ್ನಾಟಕ ರೆಗ್ಯುಲರೈಸೇಷನ ಆಫ್ ಅನಆಥರೈಸ್ಡ್ ಕನಸ್ಟ್ರಕ್ಷನ್ಸ ಇನ ಅರ್ಬನ ಏರಿಯಾಸ ಆಕ್ಟ್ 1991ರ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳಡಿಯಲ್ಲಿ'' ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಪ್ರಕರಣಗಳನ್ನು ಪರಿಗಣಿಸಬಾರದೆಂದು ಸೂಚಿಸಲಾಗಿದೆ.

ದಿನಾಂಕ 10/11/2000 ರಂದು ನಡೆದ [illegible] 10/11/2000

[signature] 30.10.2000

(ಪಿ.ಎಸ.ಗಣೇಶಮೂರ್ತಿ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ(ಭೂ.ಮಂ.).

ಗೆ:

1) ಎಲ್ಲಾ ವಿಭಾಗಾಧಿಕಾರಿಗಳು.
2) ಎಲ್ಲಾ ಜಿಲ್ಲಾಧಿಕಾರಿಗಳು.
3) ಎಲ್ಲಾ ಉಪ ವಿಭಾಗಾಧಿಕಾರಿಗಳು/ಎಲ್ಲಾ ತಹಸೀಲ್ದಾರರುಗಳು ಜಿಲ್ಲಾಧಿಕಾರಿಗಳ ಮುಖಾಂತರ.
4) ಭೂ ಮಂಜೂರಾತಿ-1 ಮತ್ತು 2 ಶಾಖೆ.
5) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
6) ಹೆಚ್ಚುವರಿ ಕಾರ್ಯದರ್ಶಿಗಳು, ಕಂದಾಯ ಇಲಾಖೆ(ಭೂ.ಸು.) ಇವರ ಆಪ್ತ ಸಹಾಯಕರು.

Received only 10/11/2000

ಎಂಜಿನಿಯರು.

[signature] 10/11/00 SKPR

[signature] 10/11

[signature] 10/11

[signature] 10/11

[signature]

[signature] 10/11

[signature] 10/11